ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 1, July-August 2022, Pp. 116-120.
©*IIMRD*, Mysuru
IIMRD JOURNALS
www.iimrd.com

# ಮರಣ ಮಂಡಲ ಮಧ್ಯದೊಳಗೆ: ಅಸ್ಪೃಶ್ಯತೆಯ ಸ್ವರೂಪ

**ಸಣ್ಣ ಮುಸ್ತಮ್ಮ**

ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

**ಸಾರಾಂಶ: (Abstract)**

*ಕನ್ನಡ ದಲಿತ ಕಾದಂಬರಿಗಳನ್ನು ಗಮನಿಸಿದಾಗ ಸಮಾಜದಲ್ಲಿ ಸ್ಪೃಶ್ಯ-ಅಸ್ಪೃಶ್ಯ ಎನ್ನುವ ಕಾರಣದಿಂದಾಗಿಯೇ ವಾದ-ವಿವಾದಗಳು ನಡೆಯುವುದರಿಂದ ಸಮಾಜದ ಒಂದು ಗುಂಪು ಮೇಲುರಿಮೆಯಿಂದ ಮೆರೆದರೆ, ಸಮಾಜದ ಇನ್ನೊಂದು ಗುಂಪು ಕೀಳರಿಮೆಯಿಂದ ಬದುಕಬೇಕಾಗುತ್ತದೆ. ಈ ಅಸ್ಪೃಶ್ಯತೆಗೆ ಕಾರಣವಾಗುವ ಅಂಶ ಯಾವುದು? ಜಾತಿಯೆ? ಧರ್ಮವೇ? ಬಣ್ಣವೆ? ಆಕಾರವೇ? ಇಲ್ಲಾ ಆ ವ್ಯಕ್ತಿಯ ಹೆಸರೆ? ಇಲ್ಲಾ ನಮ್ಮನ್ನು ಶೋಷಿಸುವ ಸಮಾಜವೇ ಎಂದು ತಿಳಿದುಕೊಂಡಾಗ ಇವೆಲ್ಲವೂ ಒಂದು ಮತ್ತೊಂದಕ್ಕೆ ಪೂರಕವಾಗಿ ಇರುವುದನ್ನು ಕಾದಂಬರಿಗಳು ತಿಳಿಸುತ್ತವೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಕಾದಂಬರಿ, ಅಸ್ಪೃಶ್ಯ, ಶೋಷಣೆ.

**ಪೀಠಿಕೆ**

ಭಾರತೀಯ ಸಮಾಜದ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳನ್ನು ಹೊರತುಪಡಿಸಿ ಅತ್ಯಂತ ಕೆಳಸ್ತರದಲ್ಲಿ ಅಸ್ಪೃಶ್ಯ ಸಮಾಜ ಇರುತ್ತದೆ. ಮಾನವ ಸಮಾನತೆಯನ್ನು ಎಲ್ಲಾ ಹಂತಗಳಲ್ಲೂ ನಿರಾಕರಿಸುತ್ತಾ ಬಂದಿರುವ ಮೇಲ್ಜಾತಿ ಜನರು ಅಸ್ಪೃಶ್ಯರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ನಡೆಸಿಕೊಂಡು ಬಂದಿದೆ. ಜಾತಿನಾಶ ಅಂದರೆ ಅಸ್ಪೃಶ್ಯತೆಯ ನಾಶ ಎಂದು ಹೇಳಬಹುದು. ದಲಿತ ಸಮಾಜದಲ್ಲಿ ಅಸ್ಪೃಶ್ಯತೆಯನ್ನು ಕುರಿತು ಹೇಳುವುದಾದರೆ ಅಸ್ಪೃಶ್ಯತೆಯು ಜಾತಿ ವ್ಯವಸ್ಥೆಯಲ್ಲಿನ ಒಂದು ವಿಶಿಷ್ಟವಾದ ಆಯಾಮ. ಜಾತಿ ವ್ಯವಸ್ಥೆಯ ಮೂಲದಡಿ ಮಡಿ, ಮೈಲಿಗೆಗಳ ಕಲ್ಪನೆ, ಮೇಲು ಕೀಳುಗಳ ಕಲ್ಪನೆಗಳಿವೆ. ಪ್ರತಿಯೊಂದು ಜಾತಿಯೂ ಬ್ರಾಹ್ಮಣರಲ್ಲಿರುವಂತಹ ಬ್ರಾಹ್ಮಣ್ಯವನ್ನು ಮೈಗೂಡಿಸಿಕೊಂಡು ಶೂದ್ರ ಜನಾಂಗದವರು ಸಹ ತಮ್ಮನ್ನು ಸಮಾಜದ ಮುಖ್ಯ ಬಿಂದುವಿನಲ್ಲಿ ಕೇಂದ್ರವಾಗಿಟ್ಟುಕೊಂಡು ತಮ್ಮ ಸ್ಥಾನವನ್ನು ನಿರ್ಣಯಿಸಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಅನೇಕ ಜನ ದಲಿತರನ್ನು ಸವರ್ಣೀಯರು ಶೋಷಣೆಗೆ ಗುರಿ ಮಾಡುವುದನ್ನು ಕಾದಂಬರಿಯಲ್ಲಿನ ಪ್ರತಿಯೊಂದು ಸನ್ನಿವೇಶವೂ ನಿರೂಪಿಸುತ್ತದೆ.

ಮುಳ್ಳೂರು ನಾಗರಾಜರ ಮರಣ ಮಂಡಲ ಮಧ್ಯದೊಳಗೆ ಕಾದಂಬರಿಯನ್ನು ನೋಡಿದಾಗ, ಈ ಕಾದಂಬರಿಯಲ್ಲಿನ ವಸ್ತು ಅನೇಕ ಕಾಲಗಳ ಮನುಷ್ಯನ ಜೀವನ. ಭೂಮಿಯ ಮೇಲೆ ಜೀವಿಸಬೇಕಾದ ವ್ಯಕ್ತಿ ಮರಣದ ಬಾಗಿಲನ್ನು ತಟ್ಟುವ, ಮರಣದ ಸೆರೆಮನೆ ಬದುಕಿನ ಒಂದು ಕ್ಷಣ. ಈ ಹಿನ್ನೆಲೆಯಲ್ಲಿ ಕಾದಂಬರಿ

*Please cite this article as: ಸಣ್ಣ ಮುಸ್ತಮ್ಮ* (2022). ಮರಣ ಮಂಡಲ ಮಧ್ಯದೊಳಗೆ: ಅಸ್ಪೃಶ್ಯತೆಯ ಸ್ವರೂಪ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.. 116-120.*

ಭೂತಕಾಲ, ವರ್ತಮಾನಕಾಲ, ಮತ್ತು ಭವಿಷ್ಯತ್ ಕಾಲಗಳ ಸಮೀಕರಣದೊಂದಿಗೆ ಜೀವಂತವಾಗುತ್ತದೆ. ಕಾಡೂರು ಕಾದಂಬರಿಕಾರರ ಕಲ್ಪನೆಯ ಒಂದು ಊರಿನ ಹೆಸರಾದರೂ ಸಹ ಭಾರತದ ಯಾವುದೇ ಒಂದು ಹಳ್ಳಿಯ ದರ್ಶನಕ್ಕೆ ಈ ಹೆಸರೊಂದು ಸಂಕೇತವಾಗಿದೆ. ಈ ಹೆಸರು ಮನುಷ್ಯನ ಕಾಡಿನ ಬದುಕಿನಲ್ಲಿ ಆಧುನಿಕತೆ ಬಂದರೂ ಯಾವ ಹಂತದ ಬದಲಾವಣೆಯೂ ಆಗದಿರುವ ವ್ಯವಸ್ಥೆಯ ಕ್ರೂರತೆಯನ್ನು ಹೇಳಿದರೆ, ಮತ್ತೊಂದು ಅರ್ಥದಲ್ಲಿ ಸ್ವಾತಂತ್ರ್ಯಾದ ನಂತರದ ಬದುಕಿನ ದಾರಿದ್ರ್ಯವನ್ನೂ ಪ್ರತಿಬಿಂಬಿಸುತ್ತದೆ. ಇಂತಹ ಊರಿನ ಮಧ್ಯದ ಜನರ ಬಾಯಿಂದ ಬೆಳವಣಿಗೆಯಾಗಿ ಮೂಡುವ ಒಂದು ಜನಪದ ಕಥೆಯ ಮೂಲಕವಾಗಿ ಇಡೀ ದಲಿತರ ಬದುಕಿನ ಹಲವು ಮಜಲುಗಳ ಸ್ವರೂಪವನ್ನು ಚಿತ್ರಿಸಿರುವುದು ಗಮನಾರ್ಹವಾಗಿದೆ. ಇಲ್ಲಿ ಬರುವ ಪಾತ್ರ ಚಿತ್ರಣಗಳು ಸಹ ತಮ್ಮ ಹೆಸರುಗಳಿಗೆ ತಕ್ಕಂತೆ ನಿರೂಪಿಸಿಕೊಳ್ಳುತ್ತವೆ.

ಈ ಕಾದಂಬರಿಯಲ್ಲಿ ಪ್ರಮುಖ ಪಾತ್ರವಾಗಿ ಕಾಣುವ ಮಾಳಗಮ್ಮ ಮೇಲ್ವರ್ಗದ ಕುಟುಂಬದಲ್ಲಿ ಜನಿಸಿ ಅತ್ಯಂತ ಸುಂದರವಾದ ರೂಪವನ್ನು ಹೊಂದಿರುತ್ತಾಳೆ. ಇವಳು ಹೊಲಯರನ್ನು ನೋಡುವುದು ಅವರನ್ನು ನೋಡಿ ಖುಷಿ ಪಡುವುದು ಮಹಾಅಪರಾಧ ಎನ್ನುವ ಮನಸ್ಥಿತಿಯನ್ನು ಹೊಂದಿದವಳಾಗಿರುತ್ತಾಳೆ. ಹೀಗಿರುವಾಗ ಅವಳ ತಮ್ಮ ಅವಳಷ್ಟು ಸುಂದರವಾದ ರೂಪವನ್ನು ಹೊಂದದೆ ಕುರೂಪವನ್ನು ಹೊಂದಿ ಜನಿಸಿರುತ್ತಾನೆ. ಇವನೊಮ್ಮೆ ಸೌದೆ ತರಲು ಅಕ್ಕನ ಮಾತಿನ ಮೇರೆಗೆ ಹೊರಟ ಸಂದರ್ಭದಲ್ಲಿ ತೋರಾರ್ರ ಚೆಲುವಿಯರನ್ನು ಕಂಡು ಈರಣ್ಣನ ಮನಸ್ಸಿಗೆ ಖುಷಿಯಾಗುತ್ತದೆ. ಈ ವಿಚಾರ ತನ್ನ ಅಕ್ಕಳಾದ ಮಾಳಗಮ್ಮನಿಗೆ ರಾಕಾಸಿ ಎಂಬ ಗೆಳತಿಯಿಂದ ತಿಳಿಯುತ್ತದೆ. ಇದರಿಂದ ಆ ತಮ್ಮನನ್ನು ಬೈದು ಆ ಕೊಳಕು ಜನರ ಜೊತೆ ಆ ಕೇರಿಯಲ್ಲಿಯೇ ಬದುಕು ಎಂದು ಮನೆಯಿಂದ ಹೊರದಬ್ಬುವ ಪ್ರಸಂಗದಿಂದ ಸವರ್ಣೀಯರಲ್ಲಿ ದಲಿತರು ಮತ್ತು ದಲಿತ ಕೇರಿಯ ಬಗೆಗೆ ಇದ್ದಂತ ಅಸ್ಪೃಶ್ಯತೆಯ ಭಾವನೆಯು ಇಲ್ಲಿ ನಮಗೆ ಅರ್ಥವಾಗುತ್ತದೆ. ಇಷ್ಟೆಲ್ಲಾ ನೀತಿ ಪಾಠವನ್ನು ಹೇಳಿದ ಮಾಳಗಮ್ಮನೇ ತನ್ನ ಜೀವನದಲ್ಲಿ ಹೊಲಯ ಎಂದು ಅರಿತುಕೊಳ್ಳದೇ ಹೊಲೆಯರ ಸಂಗಯ್ಯನನ್ನು ಆಯ್ಕೆ ಮಾಡಿಕೊಂಡು ಅವನಿಂದ ಸಿಂಗಾರು ಎನ್ನುವ ಮಗುವನ್ನು ಪಡೆಯುವ ಚಿತ್ರಣವನ್ನು ಇಲ್ಲಿ ನೋಡುತ್ತೇವೆ. ಇಲ್ಲಿ ಅಸ್ಪೃಶ್ಯರನ್ನು ನೋಡಿದ ಕಾರಣಕ್ಕೆ ತನ್ನ ತಮ್ಮನಿಂದ ಕರುಳ ಸಂಬಂಧವನ್ನು ಕಿತ್ತಿಕೊಂಡು ಒಂಟಿ ಜೀವನ ಸಾಗಿಸುವ ಮಾಳುಗಮ್ಮ ತನ್ನ ವೈಯಕ್ತಿಕ ಜೀವನದ ಆಯ್ಕೆಯ ಸಂದರ್ಭ ಬಂದಾಗ ಅಸ್ಪೃಶ್ಯತೆಯ ಆಚರಣೆಯನ್ನು ಮರೆಯುವುದನ್ನು ಕಾಣುತ್ತೇವೆ.

ಕಾದಂಬರಿಯ ಇನ್ನೊಂದು ಪ್ರಮುಖ ಪಾತ್ರವಾದ ಬಸುರಾಜು ಎನ್ನುವ ದಲಿತ ವ್ಯಕ್ತಿ ಮೇಲುಜಾತಿ ಜನರ ಸಮಾನಕ್ಕೆ ಕುಳಿತು ಟೀ ಕುಡಿಯುವಾಗ ಅದನ್ನು ಕಂಡಂತ ಅಲ್ಲಿನ ಸವರ್ಣೀಯ ಜನರು ಊರನ್ನೂ ಹೊಲಗೇರಿಯನ್ನು ಒಂದು ಮಾಡ್ತಾ ಇದಿಯಾ ಇದನ್ನು ನಾವು ನಮ್ಮಪ್ಪನ ಕಾಲದಿಂದಲೂ ಕಂಡಿದ್ದಿಲ್ಲಾ ಎಂಥಾ ಕಾಲ ಬಂತು ಬರಬಾರದ ಕಾಲ. ಎಂದು ಬಸುರಾಜುವಿನ ವರ್ತನೆಯನ್ನು ಖಂಡಿಸುವರು ಆಗ ಬಸುರಾಜು "ಅವ್ವೆ ಇದ್ಯಾವ ಸೀಮ ರೂಲ್ಸಯ್ಯ ನಮ್ಕೇರಿಗೊಂದು ರೂಲ್ಸೂ, ನಿಮ್ಕೇರಿಗೊಂದು ರೂಲ್ಸು? ನಮ್ಕೇರಿ ಗಾಳಿ ನಿಮ್ಕೇರಿ ವಳಕ ಬಂದ್ರ ನೀವೂ ಬ್ಯಾಡ ಅನ್ನಂಗಿಲ್ಲ, ನಾವೂ ಬ್ಯಾಡ ಅನ್ನಂಗಿಲ್ಲ, ಆ ಹೊಳೆ ನೀರುನ ಮೇಲ ನಿಮ್ಕೇರಿ ಹೆಸರೂ ಬರೆದಿಲ್ಲ. ನಮ್ಕೇರಿ ಹೆಸರೂ ಬರೆದಿಲ್ಲ ಹೊಲರನ್ನೂ ಬಾಯಾರ್ಕ

ಆಯ್ತುದಪ್ಪ ನೀರು ಕುಡುದರ ತಣ್ಣಗಾಯ್ತದ ಲಿಂಗಾಯ್ತನ್ಗೂ ಅಷ್ಟೀಯಾ ಬ್ರಾಮಣ್ಗೂ ಅಷ್ಟಿಯ ಅವರಪ್ಪನ್ಗೂ ಅಷ್ಟಿಯ”1 (ಪು.41–42) ಎಂದು ಹೇಳುವನು. ಬಸುರಾಜು ಮೇಲ್ಜಾತಿ ಜನರಿಗೆ ಈ ರೂಲ್ಸನ್ನು ನಮಗೆ ನಾವೇ ಮಾಡಿಕೊಂಡಿದ್ದು ಹೊರತು ಇದು ಕಡ್ಡಾಯವಲ್ಲ ಈ ಗಾಳಿ, ನೀರು, ಮಣ್ಣು, ಎಲ್ಲಾರಿಗೂ ಒಂದೇ ಹೀಗಿರುವಾಗ ಸಾಮಾನ್ಯ ಜನರಾದ ನಾವು ನಾವೇ ನಿಯಮ ಮಾಡಿ ಅದನ್ನು ಪಾಲಿಸುವುದು. ಇನ್ನೊಬ್ಬರನ್ನು ಶೋಷಣೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ತನ್ನನ್ನು ಹೀಯಾಳಿಸಿದ ಜನರಿಗೆ ಪ್ರತ್ಯುತ್ತರ ಎನ್ನುವ ರೀತಿಯಲ್ಲಿ ವಿರೋಧ ವ್ಯಕ್ತ ಪಡಿಸುವನು ಹಾಗೆಯೇ ಬಸುರಾಜು ತನ್ನ ವ್ಯಕ್ತಿತ್ವದ ವಿಶ್ಲೇಷಣೆಗಿಂತ ತಲಾತಲಾಂತರದಿಂದ ಬಂದಂತ ಅಸ್ಪೃಶ್ಯತೆಯ ಆಚರಣೆಯನ್ನು ಮತ್ತು ಅದನ್ನು ಆಚರಿಸುವ ಮೇಲ್ಜಾತಿಯನ್ನು ಕಂಡು ಮೇಲ್ಜಾತಿ ಜನರ ವಿರುದ್ಧ ಪ್ರತಿರೋಧ ತೋರುವುದನ್ನು ಇಲ್ಲಿ ನೋಡುತ್ತೇವೆ.

ಇಲ್ಲಿಯ ಇನ್ನೊಂದು ಸಂದರ್ಭವನ್ನು ನೋಡುವುದಾದರೆ ತಗಡೂರು ಪುಟ್ಟಣ್ಣನಿಗೆ ಸಂಬಂಧಿಸಿದ್ದು ಗೊತ್ತಿಲ್ಲದೇ ಇರುವ ಊರಿನಲ್ಲಿ ದಲಿತರ ಪುಟ್ಟಣ್ಣ ಸೈಕಲ್ ತುಳಿದು ಆ ಬಿಸಿಲಿನ ದಾಹಕ್ಕೆ ಬಾಯಾರಿಕೆಯಾಗಿ ಸವರ್ಣೀಯರ ಕೆರೆಯಲ್ಲಿ ನೀರನ್ನು ಕುಡಿಯುವನು ಇದನ್ನು ಕಂಡಂತ ಜವರನಾಯ್ಕನು “ಯಾನುಡ ತಗಡೂರ ಹೊಲಾರವ್ನ ನಿಂಗದೆಷ್ಟು ಕೊಬ್ಬುಡ?”2 (ಪು.ಸಂ.97) ಎಂದು ಪ್ರಶ್ನಿಸುವನು. ಆ ಮಾತಿಗೆ ಪುಟ್ಟಣ್ಣ ಕೊಬ್ಬು ಇಲ್ಲಾ ಏನೂ ಇಲ್ಲಾ ಬಾಯಾರಿಕೆಯಾಯ್ತು ನೀರು ಕುಡಿದೆ, ಕೆರೆ ನೀರಿಗೂ ಕುಲ ಜಾತಿ ಇದೇನಾ ಎಂದು ಮರು ಪ್ರಶ್ನೆ ಕೇಳುವನು. ಆಗ ಆ ಸವರ್ಣೀಯ ವ್ಯಕ್ತಿ ನೀನು ಗೊತ್ತಿದ್ದು ಮಾಡಿದರೂ ಗೊತ್ತಿಲ್ಲದೇ ಮಾಡಿದರೂ ಸಹ ತಪ್ಪು ತಪ್ಪೇ ನಿನ್ನ ತಪ್ಪಿಗೆ ತಪ್ಪು ದಂಡ ಕಟ್ಟಿ ಮುಂದಕ್ಕೆ ಹೋಗು ಎನ್ನುವನು. ಇದಕ್ಕೆ ದಲಿತನಾದ ಪುಟ್ಟಣ್ಣ ಒಪ್ಪದೇ ಅಲ್ಲಿ ವಾದ ವಿವಾದ ನಡೆಯುವುದನ್ನು ಕಾಣುತ್ತೇವೆ. ಅಂದರೆ “ಸವರ್ಣೀಯ ಸಮಾಜಕ್ಕೆ ಇಂತಹ ಮೂಲಭೂತ ಪ್ರಶ್ನೆ ಹಾಕುವಷ್ಟು, ತಾರ್ಕಿಕವಾಗಿ ಯೋಚಿಸುವಷ್ಟು, ಚಾಣಾಕ್ಷತನದಿಂದ ಸಮಸ್ಯೆಯನ್ನು ನಿರ್ವಹಿಸುವಷ್ಟು, ದಲಿತರ ಹೊಸ ಪೀಳಿಗೆ ಬೆಳೆದಿದೆ. ದಲಿತರೇ ಪ್ರಜ್ಞಾವಂತರಾಗಿ ಪ್ರಶ್ನಿಸಲು ತೊಡಗಿದರೆ ಅವರಿಗೆ ಹಕ್ಕುಗಳು ದೊರೆಯುತ್ತವೆ. ಅಷ್ಟೇ ಅಲ್ಲ ಅವರ ಎಷ್ಟೋ ಪ್ರಶ್ನೆಗಳಿಗೆ ಸವರ್ಣಿಯರು ಉತ್ತರಿಸಲಾಗದೆ ತಬ್ಬಿಬ್ಬಾಗುವುದು ಅನಿವಾರ್ಯವಾಗುತ್ತದೆ”3(ಪು.241) ಈ ಮೇಲಿನ ಘಟನೆಯಿಂದ ಪುಟ್ಟಣ್ಣ ಅಸ್ಪೃಶ್ಯತೆಯನ್ನು ಎದುರಿಸುವ ರೀತಿ ಇತರ ದಲಿತ ವ್ಯಕ್ತಿಗಳಿಗೂ ಮಾದರಿಯಾಗುತ್ತದೆ. ಇದರಿಂದ ಸಮಾಜದಲ್ಲಿ ದಲಿತರಿಗೂ ಇರುವಂತ ಸಾಮಾಜಿಕ ಸಮಾನತೆ ಸವರ್ಣೀಯರ ಗಮನಕ್ಕೂ ತಂದಂತ್ತಾಗುವುದನ್ನೂ ಈ ಕಾದಂಬರಿ ನಿರೂಪಿಸುತ್ತದೆ.

ಈ ಕಾದಂಬರಿಯ ಮತ್ತೊಂದು ಸಂದರ್ಭವನ್ನು ನೋಡಿದಾಗ ಹೊಲೆಯರ ಸಿದ್ದಿ ಮತ್ತು ಗೌಡರ ಕಿರಿಮಗ ಚಂದ್ರಪ್ಪನ ಸಂಬಂಧ ಇವರಿಬ್ಬರೂ ತಮ್ಮ ಮನಸ್ಸಿನ ಇಚ್ಛೆಯಿಂದಲೇ ಜೊತೆಯಾಗಿರುತ್ತಾರೆ. ಇದನ್ನು ಅರಿತ ಹೊಲೆಯರ ಬಸುರಾಜು ತಮ್ಮ ಕುಲದ ಈ ಹೆಣ್ಣಿಗೆ ಮೋಸ ಆಗಬಾರದೆಂದು ಅವರಿಬ್ಬರನ್ನು ಕಾಯುತ್ತಾನೆ. ಅವರಿಬ್ಬರೂ ಬಸುರಾಜುನ ಕೈಗೆ ಸಿಕ್ಕಾಗ ಅವನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅವರಿಬ್ಬರೂ ಮದುವೆಯನ್ನು ಆಗುವುದಾಗಿ ಹೇಳಿ ಆ ಸಮಯಕ್ಕೆ ಬೀಸೋದೊಣ್ಣೆಯಿಂದ ತಪ್ಪಿಸಿಕೊಂಡರು. ಆದರೆ ಇದು ಗೌಡನಿಗೆ ಗೊತ್ತಾಗಿ ಮನಸ್ಸಿನ ಗೊಂದಲಕ್ಕೆ ಗುರಿಯಾಗುವನು. ಆಗ ತನ್ನ ಮನದಲ್ಲಿನ ಯೋಚನೆಯನ್ನು “ಹೆಂಗ್ಸು ಯಾವ ಜಾತಿಯವಳಾದ್ರು ಆಗಿರ್ಲಿ ಅವಳ ಇಟ್ಕಳಕ ಮಾಡಕ ಯಾವ ಸೂತಕವು ಇಲ್ಲ. ಎಷ್ಟಾದ್ರು ಮೂರ್ಖಾಸುನೆಂಗ್ಸಲ್ವ? ಆದ್ರ ತಾಳಿ ಕಟ್ಬೇಕಾರ, ಜೊತಲಿ ಬದುಕ್ಬೇಕಾರ

ಅವಳು ನಮ್ಮ ಜಾತಿಯವ್ಳೇ ಆಗಿರ್ಬೇಕು. ಸಾಸ್ತ್ರ ಸಂಬಂಧಾದಿಗಳು ಸರಿಬರ್ಬೇಕು. ಆಗ ಸಕಲವೂ ಸುಸೂತ್ರವಾಯ್ತದ."4(ಪು.ಸಂ.47) ಎಂದು ಆಲೋಚಿಸುವ ಗೌಡನ ಮನಸ್ಥಿತಿಯನ್ನು ನೋಡಿದಾಗ ಹೆಣ್ಣು ಎಂದರೇನೆ ಕೀಳು ಎನ್ನುವ ಉದ್ದೇಶದಿಂದ ಇತರ ಕೆಳ ಜಾತಿಯ ಹೆಣ್ಣನ್ನು ಪುರುಷನಾದವನು ತನ್ನ ಸುಖ ಸಂತೋಷಕ್ಕೆ ಬಳಸಿಕೊಳ್ಳಬಹುದು. ಆದರೆ ಮದುವೆಯ ವಿಚಾರ ಬಂದಾಗ ಆ ಹೆಣ್ಣು ಬೇರೆ ಜಾತಿಯವಳಾಗಿರದೇ ತನ್ನ ಜಾತಿಯವಳೇ ಆಗಿರಬೇಕು ಎಂದು ಹೇಳುವುದು ಜಾತೀಯತೆಯನ್ನು ತೋರಿಸುವುದರ ಜೊತೆಗೆ ಕೆಳ ವರ್ಗದ ಹೆಣ್ಣು ಬಳಸಿ ಬಿಸಾಡುವ ವಸ್ತು ಎನ್ನುವಂತೆ ಮೇಲ್ವರ್ಗದ ಪುರುಷರ ಯೋಚನೆಯು ಇರುವುದು ತಿಳಿಸುತ್ತಾರೆ.

ಇದರಿಂದ ಹೆಣ್ಣನ್ನು ಆಸೆ ಪಡುವಾಗ ಜೊತೆಯಲ್ಲಿ ತಿರುಗುವಾಗ ಇಲ್ಲದಿರುವ ಶಾಸ್ತ್ರ ಸಂಪ್ರದಾಯ, ಅದೇ ಹೆಣ್ಣನ್ನು ಮದುವೆ ಆಗಿ ಜೀವನ ಸಾಗಿಸಬೇಕು ಎಂದಾಗ ಎದುರಾಗುತ್ತದೆ. ಈ ವಿಚಾರದಲ್ಲಿ ಸವರ್ಣೀಯರು ತಮ್ಮ ನಿತ್ಯ ಜೀವನದಲ್ಲಿ ತಲತಲಾಂತರದಿಂದ ನಡೆಸಿಕೊಂಡು ಬಂದಂತಹ ಅಸ್ಪೃಶ್ಯತೆಯ ಆಚರಣೆಯು ದಲಿತರ ಮೇಲೆ ದಲಿತರ ಆಸೆ ಕನಸುಗಳ ಮೇಲೆ ನೀರನ್ನು ಎರಚುವ ಕೆಲಸವನ್ನು ಮಾಡುತ್ತದೆ. ಜೊತೆಗೆ ಈ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಜೀವನ ಸಾಗಿಸುವ ಸ್ವಾತಂತ್ರ್ಯವಿದೆ. ಅದನ್ನು ಪ್ರಶ್ನೆ ಮಾಡುವ ಹಕ್ಕು ಯಾರಿಗೂ ಇಲ್ಲ. ಆದರೂ ಸಹ ಇಲ್ಲಿ ಬರುವಂತ ಮೇಲ್ವರ್ಗದ ಗೌಡರು ಜಾತಿ ಸಂಪ್ರದಾಯದ ಹೆಸರನ್ನು ಹೇಳಿ ದಲಿತರನ್ನು ದಲಿತ ಹೆಣ್ಣುಮಕ್ಕಳನ್ನು ಶೋಷಣೆ ಮಾಡುವುದನ್ನು ಈ ಕಾದಂಬರಿಯು ಅನಾವರಣಗೊಳಿಸುತ್ತದೆ. ಈ ಕಾದಂಬರಿಯ ಇನ್ನೊಂದು ಪ್ರಮುಖ ಪಾತ್ರವಾದ ಶಕಾಳಿ ಎನ್ನುವ ವ್ಯಕ್ತಿಯ ಮೇಲೆ ದೇವರು ಬರುವ ಸಂದರ್ಭವನ್ನು ನೋಡಬಹುದು.

"ಆ ಸೀಮದಲ್ಲು ದೇವರುಟ್ಟಿ ನಂಬುದವರ ಉದ್ಧಾರಮಾಡಿ ಹೊಲಾರ ಶಕಾಳಿ ಮೇಲೂ ಅವ ಹೊಲಾರವ ಅಂಬೋ ಅರುವಿಲ್ದಿಯ ಬರುತ ಹೋಗುತ ಭಕ್ತರ ಕಷ್ಟಸುಕದಲಿ ಪಾಲುಗಾರನಾಗ್ತ ತುಳಸಿ ಮಾಲೆಯೊಳುಗ ಮೆರೀತಾ ಭಕ್ತರ ತವು ಸುಂಕವ ಸುಲೀತಾ ದೇವರು ಆರಾಮಾಗಿರಲು, ಆ ದೇವರ ಉದಯದ ಕತವು ಯಾರುಗೂ ಗೋಚರಿಸದ ಸಂಗತಿಯಾಗಿತ್ತಲ್ಲಾ"5(ಪು.ಸಂ.90) ಎಂಬುವಲ್ಲಿ ದೇವರ ಅನುಕರಣೆಯು ಸಹ ಮೇಲ್ವರ್ಗದ ವ್ಯಕ್ತಿಯ ಮೇಲೆ ಆಗಬೇಕು ದಲಿತರ ಮೇಲೆ ಆಗಬಾರದು. ಆದರೆ ಈ ದೇವರು ಶಕಾಳಿ ಹೊಲೆಯ ಎಂದು ಗೊತ್ತಿದ್ದು ಅವನ ಮೇಲೆ ಬಂದು ನೆಲೆಸಿರುವುದು ತಪ್ಪು ಎಂದು ಹೇಳುವ ವಿಧದಲ್ಲಿ ಮಾತಾಡುವ ಸವರ್ಣೀಯ ವ್ಯಕ್ತಿಗಳನ್ನು ಕಂಡಾಗ ಇಲ್ಲಿ ಅಸ್ಪೃಶ್ಯತೆಯು ಎಷ್ಟರ ಮಟ್ಟಿಗೆ ನೆಲೆನಿಂತಿದೆ ಎಂಬುದು ತಿಳಿಯುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಇಡೀ ಕಾದಂಬರಿಯಲ್ಲಿ ಅಸ್ಪೃಶ್ಯತೆಯ ಸ್ವರೂಪ ನೀರಿನ ಕಾರಣಕ್ಕೆ, ಮದುವೆಯ ಕಾರಣಕ್ಕೆ, ಪ್ರೀತಿಯ ಕಾರಣಕ್ಕೆ, ಹೋಟೆಲ್ ಪ್ರವೇಶದ ಕಾರಣಕ್ಕೆ, ಸವರ್ಣೀಯರು ದಲಿತರನ್ನು ಜಾತಿಯನ್ನು ಆಧಾರವಾಗಿ ಇಟ್ಟುಕೊಂಡು ಶೋಷಣೆ ಮಾಡುವುದನ್ನು ಮುಳ್ಳೂರು ನಾಗರಾಜರ ಮರಣ ಮಂಡಲ ಮಧ್ಯದೊಳಗೆ ಕಾದಂಬರಿಯು ದಲಿತರ ಬದುಕಿನ ಅಸ್ಪೃಶ್ಯತೆಯ ಸ್ವರೂಪವನ್ನು ಹಲವು ಮಜಲುಗಳಲ್ಲಿ ಅನಾವರಣಗೊಳಿಸುತ್ತದೆ.

**ಕೊನೆ ಟಿಪ್ಪಣಿ**

1. ಮುಳ್ಳೂರು ನಾಗರಾಜು. (1992). ಮರಣ ಮಂಡಲ ಮಧ್ಯದೊಳಗೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು. ಪು.ಸಂ.41–42.
2. ಮೇಲಿನದೇ. ಪು.ಸಂ.97.
3. ಭೂಮಿಗೌಡ. (2004). ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು. ಚೇತನ್ ಬುಕ್‌ಹೌಸ್, ಮೈಸೂರು. ಪು.ಸಂ.241.
4. ಮುಳ್ಳೂರು ನಾಗರಾಜು. (1992). ಪೂರ್ವೋಕ್ತ., ಪು.ಸಂ.47.
5. ಮೇಲಿನದೇ., (1992). ಪೂರ್ವೋಕ್ತ., ಪು.ಸಂ.90.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2014). ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–6, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
- ಚಿನ್ನಸ್ವಾಮಿ ಸೋಸಲೆ. ಎನ್. (2018). ದಲಿತರ ಬದುಕು–ಮೆಲುಕು. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಭೂಮಿಗೌಡ. (2004). ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು. ಚೇತನ ಬುಕ್ ಹೌಸ್, ಮೈಸೂರು.
- ಮುಳ್ಳೂರು ನಾಗರಾಜು. (1992). ಮರಣ ಮಂಡಲ ಮಧ್ಯದೊಳಗೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.